# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

## ಬೆಂಗಳೂರು

## ಕ.ವಿ.ನಿ.ಆ. (ವಿದ್ಯುಚ್ಛಕ್ತಿ ಸರಬರಾಜು) ಸಂಹಿತೆ, 2004

## 2.12.2004ರ ರಾಜ್ಯ ಪತ್ರದಲ್ಲಿ ಅಧಿಸೂಚನೆಯಾಗಿದೆ

ಪೀಠಿಕೆ :

ಲೈಸೆನ್ಸುದಾರರು ಆಳವಡಿಸಿಕೊಳ್ಳಬಹುದಾದ ಸರಬರಾಜು ಸಂಹಿತೆಯನ್ನು ಆಯೋಗವು ನಿರ್ದಿಷ್ಟಪಡಿಸತಕ್ಕದ್ದೆಂದು ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ, 2003 ಯು ಉಪಬಂಧಿಸಿದೆ.

1) ವಿದ್ಯುಚ್ಛಕ್ತಿ ಶುಲ್ಕಗಳ ವಸೂಲು (2) ವಿದ್ಯುಚ್ಛಕ್ತಿ ಶುಲ್ಕಗಳ ಬಿಲ್ಲಿಂಗ್‌ನ ಅಂತರ (3) ಪಾವತಿಸದಿರುವುದಕ್ಕೆ ವಿದ್ಯುಚ್ಛಕ್ತಿ ಸಂಪರ್ಕದ ಕಡಿತ (4) ವಿದ್ಯುತ್ ಸರಬರಾಜಿನ ಪುನಸ್ಥಾಪನೆ (5) ಹಸ್ತಕ್ಷೇಪ, ವಿದ್ಯುತ್ ಘಟಕ ಮಾರ್ಗಗಳು ಅಥವಾ ಮಾಪಕಕ್ಕೆ ಹಾನಿ ಅಥವಾ ದುರವಸ್ಥೆಗೊಳಿಸುವುದು, (6) ವಿದ್ಯುತ್ ಸಂಪರ್ಕದ ಕಡಿತ ಮತ್ತು ಮಾಪಕ ತೆಗೆಯುವುದಕ್ಕಾಗಿ ಲೈಸೆನ್ಸುದಾರ ಅಥವಾ ಯಾವುದೇ ಇತರ ಅಧಿಕೃತ ವ್ಯಕ್ತಿಯ ಪ್ರವೇಶ (7) ಮಾಪಕ ಅಥವಾ ವಿದ್ಯುತ್ ಘಟಕ ಅಥವಾ ಮಾರ್ಗಗಳ ಸ್ಥಳಾಂತರ, ಬಡಾವಣೆ ಅಥವಾ ಪ್ರದೇಶ ಇತ್ಯಾದಿಗಳಿಂದ ಸ್ಥಳಾಂತರಿಸಲು ಸರಬರಾಜು ಸಂಹಿತೆಯಲ್ಲಿ ಒದಗಿಸತಕ್ಕದ್ದೆಂದು ಅಧಿನಿಯಮದ ಪರಿಚ್ಛೇದ 50 ನಿರ್ದಿಷ್ಟಪಡಿಸುತ್ತದೆ. ಅಧಿನಿಯಮದ ಪರಿಚ್ಛೇಧದ 181 (2) ರ ಉಪಖಂಡ (ಎಕ್ಸ್.ಪಿ) ಯೂ, ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ವಿಷಯವನ್ನು ಆಯೋಗ ನಿರ್ದಿಷ್ಟಪಡಿಸಬಹುದೆಂದು ಒದಗಿಸಿದೆ. ಮೇಲಿನಂತೆ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಕ.ವಿ.ನಿ.ಆ.ವು, ವಿದ್ಯುಚ್ಛಕ್ತಿ ಅಧಿನಿಯಮ 2003ರ ಪರಿಚ್ಛೇದ 50 ರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗೆ ಚಾಲ್ತಿ ನೀಡಲು ವಿದ್ಯುಚ್ಛಕ್ತಿ ಸರಬರಾಜು ಸಂಹಿತೆಯ ಕರಡನ್ನು ಸಿದ್ಧಪಡಿಸಿದೆ.

1. **ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ವಿಸ್ತಾರ.**

ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜು) ಸಂಹಿತೆ, 2004 ಎಂದು ಕರೆಯಬಹುದು.

– ಅವು, ಆಯೋಗವು ಅಧಿಸೂಚಿಸಬಹುದಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

– ಅವು, ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

2. **ಪರಿಭಾಷೆಗಳು :**

2.1 "ಅಧಿನಿಯಮ" ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003 (ಅಧಿನಿಯಮ 2003 ರ 36)

2.2 "ಹೆಚ್ಚುವರಿ ಸರ್ಚಾರ್ಜ್" ಎಂದರೆ ಅಧಿನಿಯಮ ಪರಿಚ್ಛೇದ 42 (4) ರಂತೆ ಆಯೋಗವು ನಿಗದಿಪಡಿಸಿದ ಸರ್ಚಾರ್ಜ್.

2.3 "ಒಪ್ಪಂದ" ಎಂದರೆ ಲೈಸೆನ್ಸುದಾರ ಮತ್ತು ಗ್ರಾಹಕರ ನಡುವೆ ವಿದ್ಯುತ್ ಸರಬರಾಜು ಸೇರಿದಂತೆ ಸೇವೆಗಳಿಗಾಗಿ ಮಾಡಿಕೊಂಡ ಹಾಗೂ ಆಯೋಗವು ಅನುಮೋದಿಸಿರುವ ಸರಬರಾಜು ಷರತ್ತುಗಳಲ್ಲಿ ನಿರ್ದಿಷ್ಟಪಡಿಸಿದ ಒಂದು ಒಪ್ಪಂದ.

2.4 ವಿದ್ಯುತ್ ಸರಬರಾಜು ಮಾಡಲು ಪ್ರಾಧಿಕೃತಗೊಂಡ ಲೈಸೆನ್ಸುದಾರನ ಭೌಗೋಳಿಕ ಪ್ರದೇಶ.

2.5 "ಬಿಲ್ಲಿನ ದಿನಾಂಕ" ಮಾಪನ ವಾಚನ ದಿನಾಂಕದಿಂದ ನಾಲ್ಕು (4) ದಿನಗಳಿಗೆ ಕಡಿಮೆಯಿಲ್ಲದಂತೆ ಸಿದ್ಧಪಡಿಸಿದ ಬಿಲ್ಲಿನ ದಿನಾಂಕ :

2.6 "ಬಿಲ್ಲಿಂಗ್ ಅವಧಿ" ಎಂದರೆ ಮಾಪಕ ಓದುವ ಎರಡು ನಿರಂತರ ದಿನಾಂಕಗಳ ಅವಧಿ.

2.7 "ಸಂಹಿತೆ" ಎಂದರೆ ಕ.ವಿ.ನಿ.ಆ. (ವಿದ್ಯುತ್ ಸರಬರಾಜು) ಸಂಹಿತೆ, 2004.

2.8 ಆಯೋಗ ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

2.9 "ಗ್ರಾಹಕ" ಎಂದರೆ ಲೈಸೆನ್ಸುದಾರ ಅಥವಾ ಅಂತಹ ಇತರ ವ್ಯಕ್ತಿಯಿಂದ ಯಾವುದೇ ಇತರ ವ್ಯಕ್ತಿಯ ಆವರಣಕ್ಕೆ ತಾತ್ಕಾಲಿಕ ಅವಧಿಗೆ ವಿದ್ಯುತ್ ಪಡೆಯುವ ಉದ್ದೇಶಕ್ಕಾಗಿ ಸಂಪರ್ಕಗೊಳಿಸಿದ ಕಾರ್ಯಗಳು ಒಳಗೊಂಡಂತೆ ಸಾರ್ವಜನಿಕರಿಗೆ ವಿದ್ಯುತ್ ಸರಬರಾಜಿನ ವ್ಯವಹಾರದಲ್ಲಿ ತೊಡಗಿರುವ ಲೈಸೆನ್ಸುದಾರ ಅಥವಾ ಯಾವುದೇ ವ್ಯಕ್ತಿಯಿಂದ ಯಾವುದೇ ವ್ಯಕ್ತಿ ಸ್ವಂತ ಬಳಕೆಗಾಗಿ ವಿದ್ಯುತ್ ಸರಬರಾಜು ಪಡೆದವನು.

2.10 "ಶುಲ್ಕಗಳು" ಎಂದರೆ ಆಯೋಗದಿಂದ ಕಾಲಕಾಲಕ್ಕೆ ಅನುಮೋದಿತವಾದ ದರಗಳು

2.11 "ಗಡುವು ದಿನಾಂಕ" ಎಂದರೆ ಬಿಲ್ಲು ಮಾಡಿದ ದಿನಾಂಕದಿಂದ ಹದಿನೈದು (15) ದಿನಗಳು.

2.12 "ಲೈಸೆನ್ಸ್" ಎಂದರೆ ಅಧಿನಿಯಮದ ಪರಿಚ್ಛೇದ 14ರಂತೆ ಮಂಜೂರಾದ ಲೈಸೆನ್ಸು.

2.13 "ಲೈಸೆನ್ಸುದಾರ" ಎಂದರೆ ಅಧಿನಿಯಮದ ಪರಿಚ್ಛೇದ 14 ರಂತೆ ಹಾಗೂ ಅಧಿನಿಯಮದಂತೆ ಪರಿಭಾವಿತ ಲೈಸೆನ್ಸು ಸೇರಿದಂತೆ ಲೈಸೆನ್ಸು ಮಂಜೂರಾತಿ ಪಡೆದ ಓರ್ವ ವ್ಯಕ್ತಿ.

2.14 "ಮಾಪಕ ಓದುವ ದಿನಾಂಕ" ಈ ವಿನಿಯಮದಂತೆ ಲೈಸೆನ್ಸುದಾರನು ನಿರ್ದಿಷ್ಟಪಡಿಸಿದಂತೆ ಮಾಪಕ ಓದಲು ನಿಗದಿಪಡಿಸಿದ ದಿನಾಂಕ.

2.15 "ಸ್ವಾಧೀನ ಹೊಂದಿರುವವರು" ಎಂದರೆ ಲೈಸೆನ್ಸುದಾರರಿಂದ ವಿದ್ಯುತ್ ಸರಬರಾಜು ಮಾಡಲು ಉದ್ದೇಶಿಸಿರುವ ಆವರಣದ ಮಾಲೀಕ ಅಥವಾ ಸ್ವಾಧೀನ ಹೊಂದಿರುವ ವ್ಯಕ್ತಿ.

2.16 "ಒಂಬಡ್ಸ್‌ಮನ್" ಎಂದರೆ ಅಧಿನಿಯಮದ ಪರಿಚ್ಛೇದ 42 (6) ಕ್ಕೆ ಸಂಬಂಧಿಸಿದಂತೆ ಸೃಜಿಸಿದ ಪ್ರಾಧಿಕಾರ.

2.17 "ಪ್ರದೇಶ" ಎಂದರೆ ಯಾವುದೇ ಭೂಮಿ, ಕಟ್ಟಡ ಅಥವಾ ನಿರ್ಮಿತಿಗಳು ಸೇರುತ್ತವೆ.

2.18 "ಮೇಲು ಕರ" ಎಂದರೆ, ಅಧಿನಿಯಮದ 39(2)(ಡಿ)(II), 40ಸಿ(II) ಮತ್ತು 42 (2) ರ ಪರಿಚ್ಛೇದಗಳಂತೆ ಆಯೋಗ ನಿಗದಿಪಡಿಸಿದ ಮೇಲು ಕರ.

2.19 "ದರ" ಎಂದರೆ ಆಯೋಗ ನಿಗದಿಪಡಿಸಿದಂತೆ ಗ್ರಾಹಕ ವರ್ಗಕ್ಕಾಗಿ ಒದಗಿಸಲಾದ ನಿರ್ದಿಷ್ಟ ಸೇವೆಗಳಿಗೆ ಅನ್ವಯವಾಗುವ ನಿರ್ದಿಷ್ಟ ಸೇವೆಗಳಿಗೆ ಪ್ರಮಾಣಿತ ದರಗಳ ಅನುಸೂಚಿ.

2.20 "ವೀಲಿಂಗ್ ಶುಲ್ಕಗಳು" ಎಂದರೆ ಆಯೋಗ ನಿರ್ದಿಷ್ಟಪಡಿಸಿದ ವಿದ್ಯುತ್ತಿನ ವೀಲಿಂಗ್‌ಗಾಗಿ (ಪ್ರಸರಣಕ್ಕಾಗಿ) ಶುಲ್ಕಗಳು.

ಈ ಸಂಹಿತೆಯಲ್ಲಿರುವ, ಆದರೆ ವಿವರಣೆಗೊಳಪಟ್ಟಿರದ ಪದಗಳು ಅಥವಾ ವ್ಯಕ್ತಪಡಿಸಿರುವ ಅನಿಸಿಕೆಗಳು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999 ಅಥವಾ ಅಧಿನಿಯಮದಲ್ಲಿರುವ ಅದೇ ಅರ್ಥಗಳನ್ನು ಹೊಂದಿರುತ್ತವೆ. ಅಸಂಗತೆಯಿರುವ ಪ್ರಕರಣದಲ್ಲಿ, ಅಧಿನಿಯಮದಲ್ಲಿರುವ ಅರ್ಥವನ್ನೇ ಈ ಸಂಹಿತೆಯ ಉದ್ದೇಶಕ್ಕಾಗಿ ಹೊಂದಿರತಕ್ಕದ್ದು.

3. ವಿದ್ಯುತ್ ಸರಬರಾಜಿನ ಶುಲ್ಕಗಳ ವಸೂಲು.

3.1 ಆಯೋಗ ಕಾಲದಿಂದ ಕಾಲಕ್ಕೆ ಅನುಮೋದಿಸಿದ, ವಿದ್ಯುತ್ ಸರಬರಾಜಿಗಾಗಿ ದರಗಳನ್ನು ಲೈಸೆನ್ಸುದಾರನು ಗ್ರಾಹಕರಿಗೆ ವಿಧಿಸತಕ್ಕದ್ದು.

3.2 ಈ ಮುಂದಿನಂತೆ ಗ್ರಾಹಕರಿಗೆ ಶುಲ್ಕ ವಿಧಿಸುವ ಅರ್ಹತೆಯನ್ನು ಲೈಸೆನ್ಸುದಾರರು ಹೊಂದಿದ್ದಾರೆ:

ಎ) ಆಯೋಗ ನಿಗದಿಮಾಡಿದಂತೆ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ದರಗಳು

ಬಿ) ಸರ್ಕಾರ ಅಧಿಸೂಚಿಸಿದಂತೆ ತೆರಿಗೆಗಳು ಮತ್ತು ಕರಗಳು.

ಸಿ) ಮುಕ್ತ ಅವಕಾಶದಂತೆ ಗ್ರಾಹಕನು ವಿದ್ಯುತ್ ಸರಬರಾಜನ್ನು ಪಡೆದಿದ್ದ ಪ್ರಕರಣದಲ್ಲಿ ವೀಲಿಂಗ್ ಶುಲ್ಕ ಮತ್ತು/ಅಥವಾ ಸರ್ಚಾರ್ಜ್ ಹಾಗೂ ಆಯೋಗವು ನಿಗದಿಪಡಿಸಬಹುದಾದಂತೆ ಅನ್ವಯವಾಗುವ ಹೆಚ್ಚುವರಿ ಸರ್ಚಾರ್ಜ್.

ಡಿ) ಆಯೋಗದಿಂದ ಕಾಲಕಾಲಕ್ಕೆ ಅನುಮೋದನೆಯಾದಂತೆ ಮತ್ತು ಮಂಜೂರಾದ/ಕೋರಿಕೆ ಬೇಡಿಕೆ ಮೀರಿಕೆ, ತಡವಾದ ಸಂದಾಯಗಳ ಮೇಲೆ ಬಡ್ಡಿಗಳಿಗಾಗಿ ದಂಡ ಶುಲ್ಕಗಳಂತಹ ಇತರ ಶುಲ್ಕಗಳು.

3.3 ಖಂಡ 3.2ಕ್ಕೆ ವಿರೋಧವಾಗದೆ, ಒಂದೇ ಪ್ರದೇಶದಲ್ಲಿ, ವಿದ್ಯುತ್ ವಿತರಣೆ ಮಾಡುತ್ತಿರುವ ಒಂದಕ್ಕಿಂತ ಹೆಚ್ಚು ಲೈಸೆನ್ಸುದಾರರಿದ್ದ ಪ್ರಕರಣದಲ್ಲಿ, ವಿದ್ಯುತ್ ಚಿಲ್ಲರೆ ಮಾರಾಟಕ್ಕಾಗಿ ಆಯೋಗವು ನಿಗದಿ ಮಾಡಿದ ದರ ಗರಿಷ್ಠತೆಗೊಳಪಟ್ಟು ಲೈಸೆನ್ಸುದಾರರು ಸೂಕ್ತವೆಂದು ಪರಿಗಣಿಸಿ ಅಂತಹ ಶುಲ್ಕಗಳನ್ನು ವಸೂಲಿ ಮಾಡಬಹುದಾಗಿದೆ.

3.4 ಗ್ರಾಹಕರೊಬ್ಬರು, ತನಗೆ ಅನ್ವಯವಾಗುವ ದರದ ಬಗೆಗೆ ಸ್ಪಷ್ಟನೆ, ಇತ್ಯಾದಿಗಳನ್ನು ನಿರೀಕ್ಷಿಸಿದಲ್ಲಿ, ಲೈಸೆನ್ಸುದಾರರು ಆತನಿಗೆ ಸಮಾಧಾನವಾಗುವಂತೆ ಸ್ಪಷ್ಟನೆ ನೀಡತಕ್ಕದ್ದು.

3.5 ಗ್ರಾಹಕರ ಕೋರಿಕೆ ಮೇರೆಗೆ, ಗ್ರಾಹಕನಿಗೆ ಅನ್ವಯವಾಗುವ ದರದ ಪ್ರತಿಯೊಂದನ್ನು, ಅದರ ಬೆಲೆಯನ್ನು ಪಡೆದು ಲೈಸೆನ್ಸುದಾರರು ನೀಡತಕ್ಕದ್ದು.

3.6 ಆಯೋಗದ ಅನುಮೋದನೆಗಾಗಿ ಲೈಸೆನ್ಸುದಾರರು, ಕಾಲಕಾಲಕ್ಕೆ ಪ್ರತಿ ಗ್ರಾಹಕ ವರ್ಗಕ್ಕೆ ಅನ್ವಯವಾಗುವ ಸೇವಾಮಾರ್ಗ ಶುಲ್ಕಗಳಂತಹ ಮತ್ತು ಇತರ ಶುಲ್ಕಗಳ ಅನುಸೂಚಿಯನ್ನು ಒದಗಿಸತಕ್ಕದ್ದು. ಶುಲ್ಕಗಳ ಅನುಸೂಚಿಯು ಸರಬರಾಜಿನ ಮಾದರಿ ಷರತ್ತುಗಳ ಭಾಗವಾಗಿರತಕ್ಕದ್ದು ಮತ್ತು ಅದಕ್ಕೆ ಯಾವುದೇ ಬದಲಾವಣೆಗಳನ್ನು ಆಯೋಗದ ಅನುಮೋದನೆ ಪಡೆದ ನಂತರವೇ ಜಾರಿ ಮಾಡತಕ್ಕದ್ದು.

4. ಬಿಲ್ಲಿಂಗ್ ವಿಧಾನ.

4.1 ಲೈಸೆನ್ಸುದಾರರು ನಿಗದಿಪಡಿಸಿ, ಅಧಿಸೂಚಿಸಬಹುದಾದಂತಹ ನಿಯತವಾದ ಅಂತರಗಳಲ್ಲಿ ಗ್ರಾಹಕರ ವಿಳಾಸಕ್ಕೆ ವಿದ್ಯುಚ್ಛಕ್ತಿ ಮತ್ತು/ಅಥವಾ ಇತರ ಸೇವೆಗಳನ್ನು ನೀಡಿದ್ದಕ್ಕಾಗಿ ಪ್ರತಿ ಗ್ರಾಹಕರಿಗೆ ಬಿಲ್ಲು ನೀಡಬೇಕು.

4.2 ಈ ಮುಂದೆ ಹೇಳುವ ಯಾವುದೇ ರೀತಿಯಲ್ಲಿ ಬಿಲ್ಲು ನೀಡತಕ್ಕದ್ದು.

ಎ) ವ್ಯಕ್ತಿಶಃ ವಿತರಣೆ.

ಬಿ) ಅಂಚೆ ಅಥವಾ ಕೊರಿಯರ್.

ಸಿ) ಗ್ರಾಹಕನಿಂದ ಸಮ್ಮತಿ ಹೊಂದಿದ್ದಲ್ಲಿ, ವಿತರಣೆಯಾಗಿದ್ದಕ್ಕಾಗಿ, ತಲುಪೊಪ್ಪಿಗೆಯನ್ನು ಸೃಜಿಸುವ ಸಾಮರ್ಥ್ಯದ ವಿದ್ಯುನ್ಮಾನ ಮಾರ್ಗಗಳು.

4.3 ಗ್ರಾಹಕನಿಗೆ ಸೇವೆಯೊದಗಿಸಿದ್ದಕ್ಕಾಗಿ ಕ್ಯಾಲೆಂಡರ್ ತಿಂಗಳಲ್ಲಿ ನಿಯತಕಾಲಿಕವಾಗಿ ಬಿಲ್ಲು ಮಾಡುವುದು. ಮಾಪಕ ವಾಚನದ ದಿನಾಂಕ, ಬಿಲ್ಲಿನ ದಿನಾಂಕ ಮತ್ತು ಪಾವತಿ ಮಾಡಬೇಕಾದ ದಿನಾಂಕಗಳನ್ನು ಅಧಿಸೂಚನೆ ಮಾಡತಕ್ಕದ್ದು. ಲೈಸೆನ್ಸುದಾರನು, ನಿಗದಿಪಡಿಸಿರುವ ಮಾಪಕ ವಾಚನ ಮತ್ತು ಬಿಲ್ಲು ನೀಡುವ ದಿನಾಂಕಗಳ ಅನುಸೂಚಿಗೆ ಬದ್ಧವಾಗಿರಬೇಕು.

4.4 ಲೈಸೆನ್ಸುದಾರನಿಂದ ವಿತರಿಸಿದ ಬಿಲ್ಲು ಗ್ರಾಹಕನಿಗೆ ಸುಲಭವಾಗಿ ಓದಲಾದ ಹಾಗೂ ಸರಳವಾಗಿ ಪರಿಶೀಲಿಸುವಂತಿರಬೇಕು.

4.5 ಬಿಲ್ಲಿನ ಆಧಾರದ ಮೇಲೆ, ಅನ್ಯಥಾ ಒದಗಿಸದ ಹೊರತು, ಮಾಪಕ ವಾಚನ ಇರಬೇಕು. ಗ್ರಾಹಕನಿಗೆ ಮಾಪಕವನ್ನು ಒದಗಿಸದಿದ್ದಲ್ಲಿ (ಮಾಪಕ ರಹಿತ ವರ್ಗ), ಆಯೋಗದಿಂದ ಅನುಮೋದಿತ ವ್ಯವಹರಣೆಗಳ ಆಧಾರದ ಮೇಲೆ ಲೈಸೆನ್ಸುದಾರನು ಬಿಲ್ಲು ಸಿದ್ಧಪಡಿಸತಕ್ಕದ್ದು.

4.6 ಖಂಡ 5ರಲ್ಲಿ ಅನ್ವಯಿಸುವುದಕ್ಕೆ ಹೊರತಾದ ಕಾರಣಗಳಿಗಾಗಿ, ದಾಖಲಿಸದ ಮಾಪಕದ ಕಾರಣದಿಂದ ಮಾಪನ ವಾಚನದ ಆಧಾರದ ಮೇಲೆ ಲೈಸೆನ್ಸುದಾರನು ಬಿಲ್ಲು ಸಿದ್ಧಪಡಿಸಲು ಸಾಧ್ಯವಾಗದಿದ್ದಲ್ಲಿ, ಗ್ರಾಹಕನು ಹಿಂದಿನ ಆರು ತಿಂಗಳ ಅವಧಿಯಲ್ಲಿ ಸರಾಸರಿ ವಿದ್ಯುತ್ ಬಳಕೆಯ ಆಧಾರದ ಮೇಲ ಬಿಲ್ಲು ನೀಡಬೇಕು. ಅಂತಹ ಪ್ರಕರಣಗಳಲ್ಲಿ ಲೈಸೆನ್ಸುದಾರರು ಅಂತಹ ಮಾಪಕವನ್ನು ಕೂಡಲೇ ಬದಲಾಯಿಸತಕ್ಕದ್ದು.

4.7 ಇತರ ಯಾವುದೇ ಕಾರಣದಿಂದ (ಬಾಗಿಲಿಗೆ ಬೀಗ ಇತ್ಯಾದಿ) ಲೈಸೆನ್ಸುದಾರನು ಮಾಪಕ ವಾಚನ ಮಾಡಲು ಸಾಧ್ಯವಾಗದಿದ್ದ ಪ್ರಕರಣದಲ್ಲಿ ಲೈಸೆನ್ಸುದಾರನು ಖಂಡ 4.6 ರಂತೆ ಅಂದಾಜು ಬಿಲ್ಲು ತಯಾರಿಸುವ ವ್ಯವಹರಣೆ ಅನುಸರಿಸಿ, ಗ್ರಾಹಕನಿಗೆ ಬಿಲ್ಲು ಒದಗಿಸಬಹುದಾಗಿದೆ. ಲೈಸೆನ್ಸುದಾರನು ನಂತರದ ಬಿಲ್ಲು ಮಾಡುವ ಮಾಪಕ ವಾಚನ ಮಾಡಿ, ಮಾಪಕ ವಾಚನದ ಅನುಸಾರವಾಗಿ ಸೂಕ್ತವಾಗಿ ಬಿಲ್ಲನ್ನು ಹೊಂದಾಣಿಕೆ ಮಾಡಬೇಕು.

4.8 ಮಾಪನ ವಾಚನ ಮಾಡಿದ 4 ದಿನಗಳೊಳಗಾಗಿ ಬಿಲ್ಲು ನೀಡಬೇಕು ಹಾಗೂ ಮಾಪಕ ವಾಚನ ಮಾಡಿದ ದಿನಾಂಕದಿಂದ 4 ದಿನಗಳ ಅವಧಿಯು ಬಿಲ್ಲು ದಿನಾಂಕ ಮೀರತಕ್ಕದ್ದಲ್ಲ. ಸ್ಥಳದಲ್ಲಿಯೇ ಬಿಲ್ಲು ನೀಡುವ ಪ್ರಕರಣದಲ್ಲಿ, ಮಾಪನ ವಾಚನ ಮತ್ತು ಬಿಲ್ಲಿನ ದಿನಾಂಕ ಒಂದೇ ಆಗಿರತಕ್ಕದ್ದು.

4.9 ಲೈಸೆನ್ಸುದಾರನು, ಗ್ರಾಹಕನಿಗೆ ಮಾಪಕವಾಚನ ದಾಖಲಿಸುವುದನ್ನು ನಿರ್ವಹಿಸಲು ಮಾಪಕ ಕಾರ್ಡನ್ನು ಒದಗಿಸಬೇಕು. ಗ್ರಾಹಕನಿಗೆ ಒದಗಿಸಲಾದ ಮಾಪಕದ ಕಾರ್ಡಿನಲ್ಲಿ ಲೈಸೆನ್ಸುದಾರನು ಮಾಪಕ ವಾಚನದ ದಿನಾಂಕ ಮತ್ತು ಮಾಪಕ ಮಾಡಿದ ಬಗೆಗೆ ದಾಖಲಿಸಬೇಕು.

4.10 ಗ್ರಾಹಕನು, ನಿಗದಿಪಡಿಸಿದ ಮಾಪಕ ವಾಚನದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಬಿಲ್ಲು ತಲುಪದಿದ್ದಲ್ಲಿ, ಲೈಸೆನ್ಸುದಾರನ ಸಂಬಂಧಿಸಿದ ಸ್ಥಳೀಯ ಕಚೇರಿಯಲ್ಲಿ ತಿಳಿಸತಕ್ಕದ್ದು. ಲೈಸೆನ್ಸುದಾರನು ಕೂಡಲೇ ಬಿಲ್ಲಿನ ನಕಲನ್ನು ಉಚಿತವಾಗಿ ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕು.

4.11 ಬಿಲ್ಲಿಂಗ್ ಅವಧಿಯೊಳಗೆ ಸಂಗತವಾಗಿರದ ಅವಧಿ ಅಥವಾ ಗ್ರಾಹಕರ ದರ ಬದಲಾವಣೆಗಳು ಒಳಗೊಳ್ಳುವ ಬಿಲ್ಲನ್ನು ಲೈಸೆನ್ಸುದಾರನು ನೀಡಿದ ಪ್ರಕರಣದಲ್ಲಿ, ಲೈಸೆನ್ಸುದಾರನು ಸಂಬಂಧಿಸಿದ ಅವಧಿಗೆ ಶುಲ್ಕದ ಭಾಗವನ್ನು ವಿಧಿಸಬೇಕು ಮತ್ತು ಸಂಗತವಾಗಿ ವಿವರಗಳನ್ನು ಬಿಲ್ಲಿನಲ್ಲಿ ಸ್ಪಷ್ಟವಾಗಿ ತೋರಿಸಬೇಕು.

4.12 ಹೊಸ ಸ್ಥಾಪನಗಳ ಪ್ರಕರಣದಲ್ಲಿ, ಸೇವೆಯನ್ನೊದಗಿಸಿದ ಎರಡು ತಿಂಗಳೊಳಗೆ ಮೊದಲ ಬಿಲ್ಲನ್ನು ಲೈಸೆನ್ಸುದಾರನು ನೀಡತಕ್ಕದ್ದು. ಗ್ರಾಹಕನು, ವಿದ್ಯುತ್ ಸರಬರಾಜು ನೀಡಿ ಎರಡು ತಿಂಗಳುಗಳ ನಂತರ ಬಿಲ್ಲನ್ನು ಸ್ವೀಕರಿಸದಿದ್ದಲ್ಲಿ ಲೈಸೆನ್ಸುದಾರನ ಸ್ಥಳೀಯ ಕಚೇರಿಗೆ ತಿಳಿಸಬಹುದಾಗಿದೆ ಮತ್ತು ಲೈಸೆನ್ಸುದಾರನು ಕೂಡಲೇ ಬಿಲ್ಲು ನೀಡಲು ವ್ಯವಸ್ಥೆ ಮಾಡತಕ್ಕದ್ದು.

4.13 ವಿದ್ಯುಚ್ಛಕ್ತಿ ಸರಬರಾಜು ಮಾಡಿದ ಶುಲ್ಕಗಳ ವಸೂಲಾಗುವ ಬಾಕಿಯೆಂದು ಬಿಲ್ಲಿನಲ್ಲಿ ನಿರಂತರವಾಗಿ ಅಂತಹ ಮೊತ್ತವನ್ನು ತೋರಿಸದ ಹೊರತು, ಲೈಸೆನ್ಸುದಾರನು, ಅಂತಹ ಮೊತ್ತವು ಬಾಕಿ ಎನಿಸುವ ದಿನಾಂಕದಿಂದ ಎರಡು ವರ್ಷಗಳ ಅವಧಿಯ ನಂತರದ ಯಾವುದೇ ಬಾಕಿಯನ್ನು ವಸೂಲು ಮಾಡತಕ್ಕದ್ದು.

4.14 ಲೈಸೆನ್ಸುದಾರನು, ಗ್ರಾಹಕನಿಗೆ ಹೆಚ್ಚು ದರ ವಿಧಿಸಲಾಗಿದೆ ಎಂದು ಬಿಲ್ಲು ಸಂದಾಯ ಮಾಡಿದ ನಂತರ ಸ್ಥಾಪಿತವಾದಲ್ಲಿ, ಲೈಸೆನ್ಸುದಾರನು ಭರಿಸಿದ ಹೆಚ್ಚುವರಿ ಮೊತ್ತಕ್ಕೆ ಬ್ಯಾಂಕ್ ದರದಲ್ಲಿ ಬಡ್ಡಿಯೊಂದಿಗೆ ಎರಡು ತಿಂಗಳೊಳಗೆ ಪಾವತಿಸತಕ್ಕದ್ದು.

4.15 ಈ ಮುಂದಿನ ಸಂದರ್ಭಗಳಲ್ಲಿ ಕೋರಿಕೆಯ ಮೇರೆಗೆ ಮಾಪಕ ವಾಚನ :

ಎ) ಮಾಲೀಕ ಅಥವಾ ನಿವಾಸಿಯ ಪ್ರದೇಶದ ನಿವಾಸದ ಬದಲಾವಣೆ/ಖಾಲಿ ಮಾಡಿದರೆ ಬಿಲ್ಲಿಂಗ್ ಉದ್ದೇಶಕ್ಕಾಗಿ ನಿಗದಿಪಡಿಸಿದ ಫೀಜನೊಂದಿಗೆ ಅರ್ಜಿಯನ್ನು ಸಲ್ಲಿಸಿದರೆ ಲೈಸೆನ್ಸುದಾರರು ವಿಶೇಷ ಮಾಪಕ ವಾಚನಕ್ಕೆ ವ್ಯವಸ್ಥೆ ಮಾಡತಕ್ಕದ್ದು.

ಬಿ) ವಿಶೇಷ ಮಾಪಕ ವಾಚನದ ವ್ಯವಸ್ಥೆಗಾಗಿ ಪ್ರದೇಶ ಖಾಲಿ ಮಾಡುತ್ತಿರುವ ಬಗೆಗೆ ಕನಿಷ್ಠ 15 ದಿನಗಳ ಮುಂಚಿತವಾಗಿ ಅರ್ಜಿ ಸಲ್ಲಿಸತಕ್ಕದ್ದು.

ಸಿ) ಲೈಸೆನ್ಸುದಾರರು ವಿಶೇಷ ಮಾಪಕ ವಾಚನದ ಮಾಡಿದ ನಂತರ, ಅಲ್ಲಿಯವರೆಗಿನ ಎಲ್ಲಾ ಬಾಕಿಗಳು ಸೇರಿದಂತೆ ಮಾಪನ ವಾಚನ ಮಾಡಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಅಂತಹ ಪ್ರಕರಣಗಳ ಅಂತಿಮ ಬಿಲ್ಲನ್ನು ನೀಡಬೇಕು.

ಡಿ) ವಿಶೇಷ ಮಾಪಕ ವಾಚನದ ಆಧಾರದ ಮೇಲೆ ಅಂತಿಮ ಬಿಲ್ಲು ನೀಡಿದ ನಂತರ ಅಂತಿಮ ಬಿಲ್ಲಿನ ಮೊತ್ತ ಹೊರತುಪಡಿಸಿ, ಅಂತಹ ಅಂತಿಮ ಬಿಲ್ಲಿನ ದಿನಾಂಕಕ್ಕೆ ಮುಂಚಿನ ಅವಧಿಯ ಯಾವುದೇ ಕ್ಲೇಮನ್ನು ಲೈಸೆನ್ಸುದಾರರು ಮಾಡತಕ್ಕದ್ದಲ್ಲ.

ಇ) ಲೈಸೆನ್ಸುದಾರರು, ಆಯೋಗದಿಂದ ಅನುಮೋದನೆಯಾದಂತೆ ಈ ಮೇಲೆ ಹೇಳಿದ ಸೇವೆಗಾಗಿ ಫೀಜನ್ನು ವಿಧಿಸಬಹುದಾಗಿದೆ.

4.16 ಈ ಮುಂದಿನ ಅಂಶಗಳನ್ನು ಗ್ರಾಹಕನಿಗೆ ನೀಡುವ ಬಿಲ್ಲು ಒಳಗೊಂಡಿರಬೇಕು:

ಎ) ಗ್ರಾಹಕನ ಹೆಸರು, ವಿಳಾಸ, ಆರ್.ಆರ್. ಸಂಖ್ಯೆ ಮತ್ತು ಬಿಲ್ಲು ನೀಡುವ ಕಚೇರಿಯ ವಿಳಾಸ.

ಬಿ) ಬಿಲ್ಲಿನ ಅವಧಿ.

ಸಿ) ಸೇವೆಯ ಮಾದರಿ ಮತ್ತು ಗ್ರಾಹಕನಿಗೆ ಅನ್ವಯವಾಗುವ ಸೂಕ್ತ ದರ.

ಡಿ) ಹಿಂದಿನ ಮತ್ತು ಈಗಿನ ಮಾಪಕ ವಾಚನಗಳು ಮತ್ತು ದಿನಾಂಕಗಳು.

ಇ) ಈಗಿನ ಬಳಕೆ

ಎಫ್) ಗುತ್ತಿಗೆ ಬೇಡಿಕೆ/ಮಂಜೂರಾದ ಲೋಡು, ಪವರ್ ಫ್ಯಾಕ್ಟರ್ ಇತ್ಯಾದಿಗಳು ಯಾವುದಾದರು ಇದ್ದಲ್ಲಿ ಅನ್ವಯವಾಗುವಂತಹ ಇತರ ಬಿಲ್ಲಿಂಗ್ ಮಾನದಂಡಗಳು.

ಜಿ) ಅನ್ವಯಿಸುವ ಶುಲ್ಕಗಳು : ನಿಗದಿತ / ಕೋರಿಕೆ / ಕನಿಷ್ಠ ಶುಲ್ಕಗಳು / ಇಂಧನ / ತೆರಿಗೆಗಳು / ರಿಯಾಯಿತಿ / ಹೊಂದಾಣಿಕೆ / ಬಾಕಿಗಳು.

ಎಚ್) ಸಂದಾಯ ಮಾಡಬೇಕಾದ ನಿವ್ವಳ ಮೊತ್ತ.

ಐ) ಲೈಸೆನ್ಸುದಾರರು ಜಾಲದ ಮೂಲಕ ಸೇವೆಯೊದಗಿಸಿದ್ದಲ್ಲಿ ವೀಲಿಂಗ್ ಶುಲ್ಕಗಳು ಮತ್ತು ಸರ್ಚಾರ್ಜ್‌ಗಳೇನಾದರೂ ಇದ್ದಲ್ಲಿ ಪ್ರತ್ಯೇಕವಾಗಿ ತೋರಿಸಬೇಕು.

ವೇದಿಕೆ ಮತ್ತು ಒಂಬಡ್ಸಮನ್) ವಿನಿಯಮಗಳು, 2004ರಲ್ಲಿ ಒದಗಿಸಲಾದಂತೆ ಒಂಬಡ್ಸಮನ್‌ಗೆ ಮೇಲ್ಮನವಿ ಮಾಡಲು ಹಕ್ಕಿದೆ ಎಂದು ಲಿಖಿತ ಮೂಲಕ ಸಲಹೆ ನೀಡಬೇಕು.

4.23 ಗ್ರಾಹಕನು ಗಡುವಿನ ದಿನಾಂಕದೊಳಗೆ ಬಿಲ್ಲಿನ ಪಾವತಿ ಮಾಡುವಲ್ಲಿ ವಿಫಲವಾದರೆ, ಆಯೋಗ ಅನುಮೋದಿಸಿರುವಂತೆ, ಲೈಸೆನ್ಸುದಾರರು ಮೊತ್ತದ ಮೇಲೆ ಬಡ್ಡಿಯನ್ನು ವಿಧಿಸಬಹುದಾಗಿದೆ.

5. **ವಿದ್ಯುತ್ ಘಟಕ : ವಿದ್ಯುತ್ ಮಾರ್ಗಗಳು ಅಥವಾ ವಿದ್ಯುತ್ ಮೀಟರನ್ನು ಹಾನಿಗೊಳಿಸುವುದು, ಹಸ್ತಕ್ಷೇಪಗೊಳಿಸುವುದು, ಪ್ರತಿಬಂಧಿಸಿದ್ದಕ್ಕೆ ಕ್ರಮಗಳು.**

5.1 ಗ್ರಾಹಕನು, ಲೈಸೆನ್ಸುದಾರರು ತೃಪ್ತಿ ಪಡುವ ರೀತಿಯಲ್ಲಿ ಮಾಪಕ ಹಾಗೂ ಅದಕ್ಕೆ ಸಂಬಂಧಿಸಿದ ಉಪಕರಣಗಳಿಗೆ ಸೂಕ್ತ ರಕ್ಷಣೆ ಒದಗಿಸಿ ನಿರ್ವಹಿಸಬೇಕು.

5.2 ಲೈಸೆನ್ಸುದಾರರು, ತನಗೆ ಸೇರಿದ ಅಥವಾ ಗ್ರಾಹಕನ ಪ್ರದೇಶದಲ್ಲಿನ ತನ್ನ ನಿಯಂತ್ರಣದಲ್ಲಿರುವ ಎಲ್ಲಾ ವಿದ್ಯುತ್ ಸರಬರಾಜು ಮಾರ್ಗಗಳು ಮತ್ತು ಉಪಕರಣಗಳು ಸುರಕ್ಷಿತ ಸ್ಥಿತಿಯಲ್ಲಿವೆ ಮತ್ತು ಎಲ್ಲಾ ದೃಷ್ಟಿಗಳಿಂದಲೂ ವಿದ್ಯುತ್ ಸರಬರಾಜಿಗೆ ಅರ್ಹವಾಗಿವೆ ಹಾಗೂ ಅನಂತರ ಲೈಸೆನ್ಸುದಾರರು ಅಂತಹ ವಿದ್ಯುತ್ ಸರಬರಾಜು ಮಾರ್ಗಗಳು ಮತ್ತು ಉಪಕರಣಗಳಿಂದ ಸ್ಥಳಗಳಲ್ಲಿ ಉಂಟಾಗುವ ಅಪಾಯಗಳನ್ನು ತಪ್ಪಿಸಲು ಮುಂಜಾಗರುಕತಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಖಚಿತಗೊಳಿಸಬೇಕು.

5.3 ಲೈಸೆನ್ಸುದಾರನು ಒದಗಿಸಿರುವ ವಿದ್ಯುತ್ ಸೇವೆಯನ್ನು, ಸ್ಥಾಪನ ಅಥವಾ ಪ್ರದೇಶದ ಗ್ರಾಹಕ ಅಥವಾ ಅನುಭೋಗದಾರನು ವಿದ್ಯುತ್ ಘಟಕ, ಮಾರ್ಗಗಳು ಅಥವಾ ಮಾಪಕ ಉಪಕರಣಗಳಿಗೆ ಹಸ್ತಕ್ಷೇಪ, ಅಥವಾ ಹಸ್ತಕ್ಷೇಪ ಮಾಡಲು ಅನುಮತಿ, ಸಂಕಷ್ಟಪಡಿಸಲು ಅಥವಾ ಹಾನಿ ಮಾಡತಕ್ಕದ್ದಲ್ಲ.

5.4 ಯಾವುದೇ ತಪಾಸಣೆ ಅಥವಾ ಮತ್ಯಾವುದೋ ರೂಪದಲ್ಲಿ, ಲೈಸೆನ್ಸುದಾರರ ವಿದ್ಯುತ್ ಘಟಕ, ಮಾರ್ಗ ಅಥವಾ ಮಾಪಕಗಳಿಗೆ ಗ್ರಾಹಕನು ಹಸ್ತಕ್ಷೇಪ ಅಥವಾ ಹಾನಿ ಮಾಡಿದ್ದಲ್ಲಿ, ಲೈಸೆನ್ಸುದಾರರು ಅಂತಹ ಗ್ರಾಹಕನಿಗೆ ವಿದ್ಯುತ್ ಸರಬರಾಜಿನ ಸಂಪರ್ಕವನ್ನು ಕಡಿತಗೊಳಿಸಬಹುದಾಗಿದೆ. ಕಂಡಿಕೆ 9 ರಲ್ಲಿ ವಿವರಿಸಿರುವಂತೆ ಸೂಚನೆ ನೀಡಿದ ನಂತರ ಅಂತಹ ವಿದ್ಯುತ್ ಸರಬರಾಜಿನ ಸಂಪರ್ಕ ಕಡಿತಗೊಳಿಸತಕ್ಕದ್ದು.

5.5 ಲೈಸೆನ್ಸುದಾರರ, ಮಾಪಕ ಉಪಕರಣಕ್ಕೆ ಹಸ್ತಕ್ಷೇಪಗಳನ್ನು ಮಾಡಿರುವುದನ್ನು ಪತ್ತೆಹಚ್ಚಲು ಸೂಕ್ತ ಭದ್ರತಾ ಉಪಕರಣಗಳು ಅಥವಾ ಮೊಹರನ್ನು ಒದಗಿಸಬೇಕು ಹಾಗೂ ಎಲ್ಲಾ ಸುರಕ್ಷಾ ಉಪಕರಣಗಳು ಮತ್ತು ಮೊಹರುಗಳ ಬಗೆಗೆ ರಿಜಿಸ್ಟರನ್ನು ನಿರ್ವಹಿಸಬೇಕು.

5.6 ಗ್ರಾಹಕ ಅಥವಾ ಲೈಸೆನ್ಸುದಾರ ಅಥವಾ ಯಾವುದೇ ಪ್ರಾಧಿಕೃತ ವ್ಯಕ್ತಿಗಳು ಮಾಪಕ ಉಪಕರಣದ ಸುರಕ್ಷಾ ಮೊಹರು ಒಡೆದು ಹೋಗಿರುವುದನ್ನು ಪತ್ತೆ ಹಚ್ಚಿದ್ದಲ್ಲಿ, ಆತನು ಇತರ ಪಕ್ಷಕಾರರಿಗೆ (ಲೈಸೆನ್ಸುದಾರ ಅಥವಾ ಗ್ರಾಹಕರಾರೇ ಇರಲಿ) ಕೂಡಲೇ ತಿಳಿಸತಕ್ಕದ್ದು. ಲೈಸೆನ್ಸುದಾರರು ತಿಳುವಳಿಕೆಯನ್ನು ಸ್ವೀಕರಿಸಿದ ಕೂಡಲೇ ಮೊದಲ ಭೇಟಿಯಲ್ಲಿಯೇ ಮೊಹರನ್ನು ಬದಲಾಯಿಸಿ ಮಾಪಕ ವಾಚನ ಮಾಡಬೇಕು.

5.7 ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಒದಗಿಸಿರುವ ಮಾಪಕದ ಉಪಕರಣವು ದೋಷ ಪೂರಿತವಾಗಿದೆಯೆಂದು ಲೈಸೆನ್ಸುದಾರರಿಗೆ ತೋರಿದರೆ, ಲೈಸೆನ್ಸುದಾರರು ಮಾಪಕದ ಉಪಕಣವನ್ನು ಪರೀಕ್ಷಿಸಿ ಮತ್ತು ಮಾಪಕದ ಉಪಕರಣದಲ್ಲಿ ಏನಾದರೂ ವ್ಯಾತ್ಯಾಸವಿದ್ದಲ್ಲಿ ಅದನ್ನು ದುರಸ್ಥಿಮಾಡಿ ಅಥವಾ ಬದಲಾಯಿಸಬೇಕು.

5.8 ಗ್ರಾಹಕನ ಕಾರಣದಿಂದ ಮಾಪಕ ಉಪಕರಣ ಹಾನಿಯಾಗಿದೆಯೆಂಬ ಸೂಕ್ತವಾದ ನಿಲುವಿಗೆ ಲೈಸೆನ್ಸುದಾರರು ಬಂದರೆ, ಕಂಡಿಕೆ 5.7 ರಡಿಯಲ್ಲಿ ಹೇಳಿರುವಂತೆ ಮಾಪಕ ಉಪಕರಣದ ಬದಲಾವಣೆಯ ವೆಚ್ಚವನ್ನು ಗ್ರಾಹಕನು ಭರಿಸಬೇಕು.

5.9 ಮಾಪಕ ಉಪಕರಣದ ಹಾನಿಯ ಸಂಭವಗಳು ಪುನರಾವರ್ತನೆಯಾಗುವ ಸಂದರ್ಭಗಳಿದ್ದಲ್ಲಿ, ಗ್ರಾಹಕನಿಗೆ ಪುನಃ ಸಂಪರ್ಕ ನೀಡುವುದಕ್ಕೆ ಲೈಸೆನ್ಸುದಾರನು ನಿರಾಕರಿಸಬಹುದಾಗಿದೆ.

6. **ಗ್ರಾಹಕನ ಪ್ರದೇಶದಲ್ಲಿ ಲೈಸೆನ್ಸುದಾರನ ಪ್ರವೇಶ:**

6.1 ಲೈಸೆನ್ಸುದಾರರು, ತನ್ನ ಸಿಬ್ಬಂದಿ ಅಥವಾ ಪ್ರಾಧಿಕೃತ ವ್ಯಕ್ತಿಗಳು, ಗ್ರಾಹಕನು ಒದಗಿಸಿದ ತುರ್ತು ಅನುಮೋದನೆಯ ಹೊರತುಪಡಿಸಿ, ಸಾಮಾನ್ಯ ವ್ಯವಹರಣೆಯ ಉದ್ದೇಶಕ್ಕಾಗಿ ಕೆಲಸದ ವೇಳೆಯಲ್ಲಿ ಮಾತ್ರ ಗ್ರಾಹಕನನ್ನು ಸಂಪರ್ಕಿಸಬೇಕೆಂದು ಖಚಿತಪಡಿಸಬೇಕು.

6.2 ಗ್ರಾಹಕನ ಪ್ರದೇಶದೊಳಗೆ ಪ್ರವೇಶ ಮಾಡುವಾಗ, ಲೈಸೆನ್ಸುದಾರರ ಸಿಬ್ಬಂದಿ ಅಥವಾ ಪ್ರಾಧಿಕೃತ ವ್ಯಕ್ತಿಯು ತನ್ನ ಗುರುತಿನ ರುಜುವಾತನ್ನು ಯಾವಾಗಲೂ ಕಾಣುವಂತೆ ಪ್ರದರ್ಶಿಸಿ / ಹಾಜರು ಪಡಿಸಬೇಕು ಹಾಗೂ ಗ್ರಾಹಕನಿಗೆ ಪ್ರದೇಶ ಪ್ರವೇಶದ ಕಾರಣವನ್ನು ಲಿಖಿತವಾಗಿ ತಿಳಿಸಬೇಕು.

6.3 ಕಂಡಿಕೆ 6.2 ಕ್ಕೆ ಒಳಪಟ್ಟು, ಲೈಸೆನ್ಸುದಾರ ಅಥವಾ ಪ್ರಾಧಿಕೃತ ಪ್ರತಿನಿಧಿಯು ವಿದ್ಯುತ್ತಿರುವ ಯಾವುದೇ ಪ್ರದೇಶ ಅಥವಾ ಆತನಿಂದ ಸರಬರಜಾಗುತ್ತಿರುವ ಯಾವುದೇ ಪ್ರದೇಶ ಅಥವಾ ಭೂಮಿಯ ಮೇಲೆ, ಕೆಳಗೆ, ಅದನ್ನು ದಾಟಿ, ಒಳಗೆ ಅಥವಾ ಮೇಲೆ ವಿದ್ಯುತ್ ಸರಬರಾಜು ಮಾರ್ಗಗಳು ಅಥವಾ ಇತರ ಕಾಮಗಾರಿಗಳನ್ನು ಕಾನೂನು ಬದ್ಧವಾಗಿ ಮಾಡಿ, ಆತನಿಂದ ಈ ಮುಂದ ಹೇಳುವ ಉದ್ದೇಶಗಳಿಗಾಗಿ ವಿದ್ಯುತ್ ನೀಡಲಾಗಿದ್ದರೆ:

ಎ) ಲೈಸೆನ್ಸುದಾರರಿಗೆ ಸೇರಿದ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ಸರಬರಾಜು ಮಾರ್ಗಗಳು, ಮಾಪಕಗಳು, ಜೋಡಣೆ, ಕಾಮಗಾರಿಗಳು ಮತ್ತು ಸಲಕರಣೆಗಳ ತಪಾಸಣೆ, ಪರೀಕ್ಷೆ, ದುರಸ್ಥಿ ಅಥವಾ ಬದಲಾವಣೆಗಾಗಿ;

ಬಿ) ಸರಬರಾಜಾದ ವಿದ್ಯುತ್ತಿನ ಪ್ರಮಾಣವನ್ನು ಖಚಿತ ಪಡಿಸಿಕೊಳ್ಳುವುದು; ಅಥವಾ

ಸಿ) ವಿದ್ಯುತ್ ಸರಬರಾಜಿನ ಅಗತ್ಯವಿಲ್ಲದ ಕಾರಣದಿಂದ ಸಂಪರ್ಕವನ್ನು ತೆಗೆಯಲು ಅಥವಾ ಅದರ ಮಾರ್ಗವನ್ನು ತೆಗೆದು ಹಾಕುವ ಅಧಿಕಾರ ಹೊಂದಿರುವ ಲೈಸೆನ್ಸುದಾರನು ಅಂತಹ ಸರಬರಾಜಿನ ಸಂಪರ್ಕ ಕಡಿತಗೊಳಿಸಲು, ಲೈಸೆನ್ಸುದಾರರಿಗೆ ಸೇರಿದ ಯಾವುದೇ ವಿದ್ಯುತ್ ಸರಬರಾಜು ಮಾರ್ಗಗಳು, ಮಾಪಕಗಳು, ಜೋಡಣೆಗಳು, ಕಾಮಗಾರಿಗಳು ಅಥವಾ ಸಲಕರಣೆಗಳನ್ನು ತೆಗೆದುಕೊಂಡು ಹೋಗಬಹುದು.

6.4 ಈ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ದಂಡಾಧಿಕಾರಿಯ ಪರವಾಗಿ ಮಾಡಿದ ವಿಶೇಷ ಆದೇಶದಂತೆ ಲೈಸೆನ್ಸುದಾರ ಅಥವಾ ಪ್ರಾಧಿಕೃತ ವ್ಯಕ್ತಿಯು ಈ ಮುಂದೆ ಹೇಳುವ ಅಂಶಗಳ ಬಗೆಗೆ ಲಿಖಿತವಾಗಿ 24 ಗಂಟೆಗಳಿಗೆ ಕಡಿಮೆಯಿಲ್ಲದಂತೆ ಅನುಭೋಗದಾರನಿಗೆ ಅವಕಾಶ ನೀಡಿ ವಿದ್ಯುತ್ ಸರಬರಾಜು ಮಾರ್ಗ ತೆಗೆಯಬಹುದು:

ಎ) ಕಂಡಿಕೆ 6.3ರಲ್ಲಿ ಉಲ್ಲೇಖಿತವಾಗಿರುವ ಉದ್ದೇಶಕ್ಕಾಗಿ ಯಾವುದೇ ಪ್ರದೇಶ ಅಥವಾ ಭೂಮಿಯಲ್ಲಿ ಪ್ರವೇಶ.

ಬಿ) ಗ್ರಾಹಕನಿಗೆ ಸೇರಿದ ವಿದ್ಯುತ್ ಬಳಕೆಗಾಗಿ ವಿದ್ಯುತ್ ಸರಬರಾಜಿನ ವಿದ್ಯುತ್ ತಂತಿಗಳು, ಜೋಡಣೆಗಳು, ಕಾಮಗಾರಿಗಳು ಮತ್ತು ಉಪಕರಣಗಳ ಪರಿಶೀಲನೆ ಮತ್ತು ತಪಾಸಣೆಗಾಗಿ ತನ್ನಿಂದ (ಲೈಸೆನ್ಸುದಾರರು) ವಿದ್ಯುತ್ ಸರಬರಾಜಾಗಲಿರುವ ಯಾವುದೇ ಪ್ರದೇಶಕ್ಕೆ ಪ್ರವೇಶ.

6.5 ಗ್ರಾಹಕನು, ಕಂಡಿಕೆ 6.3 ಮತ್ತು 6.4ಕ್ಕೆ ಸಂಬಂಧಿಸಿದಂತೆ ತನ್ನ ಪ್ರದೇಶದೊಳಗೆ ಪ್ರವೇಶಿಸುವುದಕ್ಕೆ ಲೈಸೆನ್ಸುದಾರ ಅಥವಾ ಯಾವುದೇ ಪ್ರಾಧಿಕೃತ ವ್ಯಕ್ತಿಗಳಿಗೆ ಅವಕಾಶ ನೀಡದಿದ್ದಲ್ಲಿ ಅಥವಾ ಮೇಲಿನ ಕಂಡಿಕೆಗಳಂತೆ ಪ್ರಾಧಿಕೃತನಾಗಿರುವ ವ್ಯಕ್ತಿಯನ್ನು ಕಾರ್ಯ ನಿರ್ವಹಿಸಲು ಅವಕಾಶ ನೀಡದಿರುವುದು ಅಥವಾ ಸೂಕ್ತವಾದ ಸೌಲಭ್ಯಗಳನ್ನು ನೀಡಲು ವಿಫಲನಾದಲ್ಲಿ, ಲೈಸೆನ್ಸುದಾರರು ಗ್ರಾಹಕನಿಗೆ ಲಿಖಿತ ಸೂಚನೆ ನೀಡಿದಾಗಿನಿಂದ 24 ಗಂಟೆಗಳು ಕಳೆದ ನಂತರ ಅಂತಹ ನಿರಾಕರಣೆ ಅಥವಾ ವಿಫಲರಾಗುವವರೆಗೆ ಗ್ರಾಹಕನಿಗೆ ನೀಡಲಾಗಿರುವ ವಿದ್ಯುತ್ ಸರಬರಾಜಿನ ಸಂಪರ್ಕವನ್ನು ಕಡಿತಗೊಳಿಸಬಹುದಾಗಿದೆ. ಆದರೆ, ದೀರ್ಘ ಕಾಲದವರೆಗೆ ಮಾಡುವಂತಿಲ್ಲ.

**7. ಲೈಸೆನ್ಸುದಾರನಿಂದ ಸರಬರಾಜಿನ ಸಂಪರ್ಕದ ಕಡಿತ.**

7.1 ಲೈಸೆನ್ಸುದಾರರು, ಈ ಮುಂದಿನ ಸಂದರ್ಭಗಳನ್ನು ಹೊರತುಪಡಿಸಿ, ಗ್ರಾಹಕನಿಗೆ ಒದಗಿಸಲಾದ ವಿದ್ಯುತ್ ಸರಬರಾಜಿನ ಸಂಪರ್ಕವನ್ನು ಕಡಿತಗೊಳಿಸತಕ್ಕದ್ದಲ್ಲ:

ಎ) ಗ್ರಾಹಕನ ಕೋರಿಕೆ ಮೇರೆಗೆ.

ಬಿ) ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಕಾನೂನು ಪ್ರಾಧಿಕಾರದಿಂದ ವ್ಯಕ್ತಿಯೊಬ್ಬರು ಕಟ್ಟಾಜ್ಞೆಯನ್ನು ಹೊರಡಿಸಿದರೆ ಲೈಸೆನ್ಸುದಾರರು ಕಟ್ಟಾಜ್ಞೆಯನ್ನು ಪಾಲಿಸಬೇಕಾಗುತ್ತದೆ.

ಸಿ) ಗ್ರಾಹಕನೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ಲೈಸೆನ್ಸುದಾರರು ಹಾಗೆ ಮಾಡಲು ಅರ್ಹರಾಗಿರುತ್ತಾರೆ.

ಡಿ) ಗ್ರಾಹಕನು, ಲೈಸೆನ್ಸುದಾರನು ಸರಬರಾಜಿನ ಸಂಪರ್ಕ ನಿಲ್ಲಿಸುವ ಅರ್ಹತೆಯನ್ನು ನೀಡುವ ಸಂಹಿತೆಯ ಉಪಬಂಧಗಳನ್ನು ಉಲ್ಲಂಘಿಸಿರುವನೆಂದು ಲೈಸೆನ್ಸುದಾರರು ಸಕಾರಣದಿಂದ ನಂಬಿದಾಗ.

ಇ) ಗ್ರಾಹಕ ಅಥವಾ ಯಾವುದೇ ವ್ಯಕ್ತಿಗೆ ಅಥವಾ ಆಸ್ತಿಗೆ ಹಾನಿ ಅಥವಾ ಸುರಕ್ಷತೆಯ ಅಪಾಯ ಅಥವಾ ಆರೋಗ್ಯದ ಹಾನಿಗೆ ಕಾರಣ ಅಥವಾ ಸಂಭವವಿರುವುದರಿಂದ ಸಂಪರ್ಕದ ಕಡಿತಕ್ಕೆ ವಿಫಲವಾಗಲಾಗಿದೆ ಎಂದು ಸಕಾರಣದಿಂದ ಲೈಸೆನ್ಸುದಾರನು ತಿಳಿದುಕೊಂಡರೆ;

ಎಫ್) ಲೈಸೆನ್ಸುದಾರರು ನಿಗದಿ ಪಡಿಸಿದಂತೆ ಗ್ರಾಹಕನ ಸ್ಥಾಪನವು, ನಿಯಮಗಳನ್ನು ತೃಪ್ತಿಕರವಾಗಿ ಅನ್ವಯಿಸಿಲ್ಲ ಅಥವಾ ನಿಗದಿಪಡಿಸಿದ ಯಾವುದೇ ಇತರ ಸೂಕ್ತ ಅಗತ್ಯಗಳನ್ನು ಪಾಲಿಸಿಲ್ಲ ಎಂದು ಲೈಸೆನ್ಸುದಾರನು ತಿಳಿದರೆ;

ಜಿ) ಸಂಬಂಧಿಸಿದ ವಿನಿಯಮಗಳಲ್ಲಿ ಒದಗಿಸಲಾದಂತೆ ಗ್ರಾಹಕನು ಒದಗಿಸಿರುವ ಭದ್ರತಾ ಠೇವಣಿ ಸಾಕಾಗುವುದಿಲ್ಲ ಅಥವಾ ಭದ್ರತೆ ಒದಗಿಸಲು ಗ್ರಾಹಕನು ವಿಫಲವಾಗಿದ್ದಾನೆ ಎಂದು ಸಕಾರಣದಿಂದ ತಿಳಿದುಕೊಂಡರೆ;

ಎಚ್) ಕಂಡಿಕೆ 4.18 (ಜೆ) ಯಂತೆ ಸಂದಾಯ ಮಾಡದಿರುವುದು.

ಐ) ಕಂಡಿಕೆ 6.5 ರಂತೆ ಒದಗಿಸಿದಂತೆ ಮತ್ತು / ಅಥವಾ ಕಂಡಿಕೆ 5.4 ರಂತೆ ವಿದ್ಯುತ್ ಘಟಕ, ವಿದ್ಯುತ್ ಮಾರ್ಗ ಅಥವಾ ಮಾಪಕದಲ್ಲಿ ಹಸ್ತಕ್ಷೇಪ, ಒತ್ತಡ ಅಥವಾ ಹಾನಿಗೊಳಿಸುವುದು.

7.2 ಗ್ರಾಹಕನಿಗೆ ಕಂಡಿಕೆ 7.1 (ಬಿ) ನಿಂದ 7.1 (ಐ) ಗಳಂತೆ ವಿದ್ಯುತ್ ಸಂಪರ್ಕ ಕಡಿತವನ್ನು ಜಾರಿಗೊಳಿಸುವ ಮುಂಚೆ, ಕಂಡಿಕೆ 9 ರಲ್ಲಿ ಒದಗಿಸಲಾದ ಅಂಶಗಳಂತೆ ಸೂಚನೆಯನ್ನು ಲೈಸೆನ್ಸುದಾರನು ನೀಡಬೇಕು.

7.3 ಅಧಿನಿಯಮದ ಪ್ರಕಣ 56 (1) ರಲ್ಲಿ ಒದಗಿಸಲಾದ ಉಪಬಂಧದಂತೆ ಲೈಸೆನ್ಸುದಾರ ಹಾಗೂ ಗ್ರಾಹಕನ ನಡುವೆ ವಿವಾದದ ಇತ್ಯರ್ಥವನ್ನು ಬಾಕಿಯಿರಿಸಿ, ಗ್ರಾಹಕನಿಂದ ಕ್ಲೇಮು ಮಾಡಿರುವ ಮೊತ್ತಕ್ಕೆ ಸಮಾನವಾದ ಹಣವನ್ನು ಪ್ರತಿಭಟನಾರ್ಥವಾಗಿ ಗ್ರಾಹಕರು ಠೇವಣಿಯಿರಿಸಿದರೆ ಅಥವಾ ವಿದ್ಯುತ್ ಶುಲ್ಕಗಳಿಂದ ಬಾಕಿಯಿರುವ ಮೊತ್ತವನ್ನು ಕಳೆದ ಆರು ತಿಂಗಳ ಸರಾಸರಿಯಾಧಾರದ ಮೇಲೆ ಲೆಕ್ಕಾಚಾರ ಮಾಡಿ ಇವುಗಳಲ್ಲಿ ಯಾವುದು ಕಡಿಮೆಯಿದ್ದರೆ, ಕಂಡಿಕೆ 7.1 (ಎಚ್) ನಂತೆ ಲೈಸೆನ್ಸುದಾರರು ಗ್ರಾಹಕನಿಗೆ ಸರಬರಾಜು ಮಾಡಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತಿಲ್ಲ.

8. **ಸರಬರಾಜಿನ ಪುನರ್ ಸಂಪರ್ಕ :**

8.1 ಕಂಡಿಕೆ 7.1 (ಜಿ) ಮತ್ತು 7.1 (ಎಚ್) ನಂತೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಲ್ಲಿ ಮತ್ತು ಗ್ರಾಹಕನು ಲೈಸೆನ್ಸುದಾರನೊಂದಿಗೆ ಪಾವತಿಸಬೇಕಾಗಿರುವ ಬಾಕಿಯನ್ನು ಇತ್ಯರ್ಥ ಪಡಿಸಿಕೊಂಡಲ್ಲಿ, ಕ.ವಿ.ನಿ.ಆ (ಕಾರ್ಯಾಧಾರಿತ ಗುಣ ಮಟ್ಟಗಳು) ವಿನಿಯಮಗಳು, 2004 ರಲ್ಲಿ ನಿಗದಿಪಡಿಸಿದ ಕಾಲದೊಳಗೆ ಗ್ರಾಹಕನ ಸ್ಥಾಪನಕ್ಕೆ ಲೈಸೆನ್ಸುದಾರರು ಪುನರ್ ಸಂಪರ್ಕ ಕಲ್ಪಿಸತಕ್ಕದ್ದು.

8.2 ನಿವಾರಣೆಗಾಗಿ ಇರುವ ಕಂಡಿಕೆ 7.1 (ಇ) ಮತ್ತು 7.1 (ಎಫ್) ಗಳಂತೆ, ಗ್ರಾಹಕನ ಸ್ಥಾಪನಕ್ಕೆ ವಿದ್ಯುತ್ ಸಂಪರ್ಕಕ್ಕೆ ಕಡಿತಗೊಳಿಸುವುದಕ್ಕೆ ಕಾರಣವಾಗಿರುವ ಗುಣಾವಗುಣಗಳೆಂಬ ಸಕಾರಣದಿಂದ ಲೈಸೆನ್ಸುದಾರರು ಭಾವಿಸಿದಲ್ಲಿ, ಗ್ರಾಹಕನ ಸ್ಥಾಪನಕ್ಕೆ ಕೂಡಲೇ ಪುನರ್ ಸಂಪರ್ಕ ನೀಡತಕ್ಕದ್ದು.

8.3 ಲೈಸೆನ್ಸುದಾರರು, ಅನುಮೋದಿತ ಶುಲ್ಕಗಳ ಅನುಸೂಚಿಯಲ್ಲಿ ಒದಗಿಸಲಾದಂತೆ ಗ್ರಾಹಕನ ಸ್ಥಾಪನಕ್ಕೆ ಪುನರ್ ಸಂಪರ್ಕ ಕಲ್ಪಿಸುವುಕ್ಕಾಗಿ ಫೀಜನ್ನು ವಿಧಿಸಬಹುದಾಗಿದೆ.

9. **ಗ್ರಾಹಕನಿಗೆ ಸೂಚನೆ :**

9.1 ಲೈಸೆನ್ಸುದಾರನಿಂದ ಗ್ರಾಹಕನಿಗೆ ಸಂಹಿತೆಯನುಸಾರ ಮತ್ತು ಈ ಸಂಹಿತೆಯಂತೆ ನೀಡಿದ ಸೂಚನೆಗಳನ್ನು ನೀಡಲಾಗಿದೆ ಎಂದು ಖಚಿತ ಪಡಿಸಿಕೊಳ್ಳಬೇಕು:

ಎ) ಕನ್ನಡ ಅಥವಾ ಇಂಗ್ಲಿಷ್‌ನ ಸರಳ ಭಾಷೆಯಲ್ಲಿ ವ್ಯಕ್ತ ಪಡಿಸಿದ ಮತ್ತು ಬರವಣಿಗೆಯಲ್ಲಿ.

ಬಿ) ಸೂಚನೆಗೆ ನಿರ್ದಿಷ್ಟಪಡಿಸಿದ ಕಾರಣ ಹಾಗೂ ಲೈಸೆನ್ಸುದಾರನಿಂದ ಸಂಭವನೀಯ ಕ್ರಮ

ಸಿ) ಅಗತ್ಯ ಬಿದ್ದರೆ ಲೈಸೆನ್ಸುದಾರರ ಸ್ಥಳೀಯ ಕಚೇರಿಯನ್ನು ಸಂಪರ್ಕಿಸುವಂತೆ ಗ್ರಾಹಕನಿಗೆ ಕೋರಿಕೆಯಂತೆ ಸೂಚನೆ ನೀಡಲಾಗಿದೆ ಎಂದು ಖಚಿತ ಪಡಿಸಿಕೊಳ್ಳಬೇಕು.

9.2 ಲೈಸೆನ್ಸುದಾರರು ಈ ಸಂಹಿತೆಯಂತೆ ಗ್ರಾಹಕರಿಗೆ ಯಾವುದೇ ಸೂಚನೆಯನ್ನು ಈ ಮುಂದಿನ ಯಾವುದೇ ಮಾರ್ಗದಲ್ಲಿ ಕಳುಹಿಸಬೇಕು:

ಎ) ನೋಂದಾಯಿತ ಅಂಚೆ, ಅಂಚೆ ಪ್ರಮಾಣ ಪತ್ರ, ಕೊರಿಯರ್ ಅಥವಾ ಅಂತಹುದೇ ಇತರ ಮೂಲಕ

ಅಥವಾ

ಬಿ) ಗ್ರಾಹಕನ ವಿಳಾಸದಲ್ಲಿ ವಾಸವಾಗಿರುವ ವ್ಯಕ್ತಿಗೆ ಮುಖತಃ ವಿತರಣೆ;

ಸಿ) ಸೂಕ್ತವಾದ ಕಾರ್ಯ ತತ್ಪರತೆಯಿಂದ ಸೂಚನೆಯನ್ನು ವಿತರಿಸಲು ವ್ಯಕ್ತಿಗಳೇ ಇಲ್ಲದಿದ್ದ ಪ್ರಕರಣದಲ್ಲಿ, ಅಂತಹ ಪ್ರದೇಶದಲ್ಲಿ ಎದ್ದು ಕಾಣುವಂತೆ ಅದನ್ನು ಅಂಟಿಸಬೇಕು.

9.3 ಕಂಡಿಕೆ 4.18 (ಜಿ) ನಂತೆ ಸೂಚನೆಯಿದ್ದಲ್ಲಿ, ಲೈಸೆನ್ಸುದಾರರು,

ಎ) ಗ್ರಾಹಕನು ಗಡುವಿನ ದಿನಾಂಕದೊಳಗೆ ಸಂದಾಯ ಮಾಡಿರದಿರುವುದನ್ನು ನಮೂದಿಸಬೇಕು.

ಬಿ) ಗ್ರಾಹಕನು ಬಾಕಿಯಿರುವ ಮೊತ್ತವನ್ನು ಸಂದಾಯ ಮಾಡಲು ವಿಫಲವಾದಲ್ಲಿ ಲೈಸೆನ್ಸುದಾರರು, ಪ್ರದೇಶಕ್ಕೆ ವಿದ್ಯುತ್ ಸರಬರಾಜು ಸೇವೆಗಳನ್ನು ನಿಯಂತ್ರಿಸುವ ಅಥವಾ ಸಂಪರ್ಕ ಕಡಿತಗೊಳಿಸುವ ಅರ್ಹತೆ ಪಡೆಯುತ್ತಾರೆ;

ಸಿ) ಕಂಡಿಕೆ 4.18 (ಬಿ) ನಂತೆ ಸಂದಾಯ ಮಾಡಲು ಇರುವ ಅವಕಾಶಗಳ ಸ್ಥೂಲ ವಿವರಣೆಯನ್ನು ನೀಡಬೇಕು.

ಡಿ) ಕಂಡಿಕೆ 4.18 (ಎಚ್) ಅನ್ವಯವಾಗುವಂತಿದ್ದರೆ ಕಂತಿನ ಅವಕಾಶದ ಸ್ಥೂಲ ವಿವರಣೆ ನೀಡಬೇಕು.

10. ಸಂಹಿತೆಯ ಪರಿಶೀಲನೆ.

ಈ ಸಂಹಿತೆಯಲ್ಲಿ ಯಾವುದಾದರು ಬದಲಾವಣೆಗಳ ಅಗತ್ಯವಿದೆ ಎಂದು ಆಯೋಗವು ಭಾವಿಸಿದರೆ, ಸಲಹೆ ನೀಡುವುದಕ್ಕಾಗಿ ಗ್ರಾಹಕ ಸಂಘಟನೆಗಳು, ಲೈಸೆನ್ಸುದಾರರ ಹಿರಿಯ ಅಧಿಕಾರಿಗಳು ಮತ್ತು ಆಯೋಗವನ್ನು ಪ್ರತಿನಿಧಿಸುವ ವ್ಯಕ್ತಿಗಳಿರುವ ಪರಿಣತರ ತಂಡವನ್ನು ರಚಿಸಬಹುದಾಗಿದೆ. ಈ ತಂಡ ಮಾಡುವ ಸಲಹೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವುದು ಆಯೋಗದ ವಿವೇಚನೆಗೆ ಬಿಟ್ಟದ್ದು.

11. ಅಡಚಣೆಗಳನ್ನು ನಿವಾರಿಸುವ ಅಧಿಕಾರ :

ಈ ವಿನಿಯಮಗಳ ಯಾವುದೇ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ಅಡಚಣೆಗಳು ಎದುರಾದಲ್ಲಿ, ಆಯೋಗವು ಅಡಚಣೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ, ಅಗತ್ಯವಾಗಿ ಯುಕ್ತವೆಂದು ಆಯೋಗಕ್ಕೆ ತೋರುವ ಅಧಿನಿಯಮದೊಂದಿಗೆ ಅಸಂಗತವಾಗದಂತೆ, ಆಯೋಗವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಿತರಣ ಲೈಸೆನ್ಸುದಾರರಿಗೆ ಕ್ರಮಕೈಗೊಳ್ಳುವಂತೆ ನಿರ್ದೇಶಿಸಬಹುದಾಗಿದೆ.

12. ರದ್ದು ಮಾಡುವುದು :

ಕಾಲಕಾಲಕ್ಕೆ ತಿದ್ದುಪಡಿಯಾದ ಕ.ವಿ.ನಿ.ಆ (ಬಿಲ್ಲುಗಳ ಸಂದಾಯದ ಆಚರಣಾ ಸಂಹಿತೆ) ವಿನಿಯಮಗಳು, 2001, ಮತ್ತು ಕ.ವಿ.ನಿ.ಆ (ವಿದ್ಯುಚ್ಛಕ್ತಿ ಸರಬರಾಜು ಮತ್ತು ವಿತರಣೆ) ಸಂಹಿತೆ 2000–01 ರ ಪ್ರಕರಣ 26 ಮತ್ತು 29ಗಳನ್ನು ರದ್ದು ಪಡಿಸಲಾಗಿದೆ.

ಆಯೋಗದ ಆದೇಶದ ಮೇರೆಗೆ

ಸಹಿ

ಕಾರ್ಯದರ್ಶಿ